**<u>ಅಸಲು ದಾವಾ ಸಂಖ್ಯೆ - 179/2020</u>** **ಪಿ.ಡಬ್ಲ್ಯೂ:-2**

ದಿನಾಂಕಃ **17.07.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ನಾನು ಸುಮಾರು 15 ವರ್ಷಗಳಿಂದ ಹೊನ್ನಾಳಿಯಲ್ಲಿ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದೆನು. ಪತ್ರ ಬರಹಗಾರದ ಕೆಲಸದ ಜೊತೆಗೆ ವ್ಯವಸಾಯ ಕೆಲಸವನ್ನು ಸಹ ಮಾಡುತ್ತಿದ್ದೆನು. ನನ್ನ ಊರು ಮೂಲತಃ ಸೋಗಿಲು ಗ್ರಾಮ ನಾನು ಈಗ ಸುರಹೊನ್ನೆ ಗ್ರಾಮದಲ್ಲಿ ವಾಸವಾಗಿದ್ದೇನೆ. ಸೋಗಿಲು ಇಂದ ಬಿದರಹಳ್ಳಿ ಸುಮಾರು 7-8 ಕಿ.ಮೀ. ಅಂತರವಿರುತ್ತದೆ. ನಿಪಿ-1 ಕರಾರು ಪತ್ರವನ್ನು ತಯಾರು ಮಾಡಲು ದಾಖಲೆಗಳನ್ನು 1 ನೇ ಪ್ರತಿವಾದಿ ಕೊಟ್ಟಿರುತ್ತಾರೆ. ನಿಪಿ-1 ಕ್ರಯದ ಕರಾರು ಪತ್ರವನ್ನು ತಯಾರು ಮಾಡುವ ಪೂರ್ವದಲ್ಲಿ ವಾದಿ ಮತ್ತು 1 ನೇ ಪ್ರತಿವಾದಿ ಇಬ್ಬರು ಜೊತೆಗೆ ಬಂದಿದ್ದರು. ನಿಪಿ-1 ಕ್ರಯದ ಕರಾರು ಪತ್ರವನ್ನು ಪಹಣಿ ಮತ್ತು ಮಟೇಷನ್ ದಾಖಲೆಗಳನ್ನು ಪರಿಶೀಲನೆ ಮಾಡಿ ತಯಾರು ಮಾಡಿರುತ್ತೇನೆ. ಪಹಣಿ ಮತ್ತು ಮುಟೇಷನ್ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ಮೂಲ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಸಾಮಾನ್ಯವಾಗಿ ಕ್ರಯದ ಕರಾರು ಪತ್ರ ಸಾಲದ ಹಣದ ಭದ್ರತೆಗಾಗಿ ಜನರು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಕ್ರಯದ ಕರಾರು ಪತ್ರವನ್ನು ಬರೆದುಕೊಡುವ ಸಮಯದಲ್ಲಿ ಕುಟುಂಬದ ಎಲ್ಲಾ ಸದಸ್ಯರು ಪಕ್ಷಗಾರರಾಗಿ ಬರೆದುಕೊಡಬೇಕಾಗುತ್ತದೆ ಎಂದರೆ ಸರಿ. ನಿಪಿ-1 ಕ್ರಯದ ಕರಾರು ಪತ್ರವನ್ನು ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯನ್ನು ಅವರ ಮಕ್ಕಳ ಬಗ್ಗೆ ವಿಚಾರ ಮಾಡಿದಾಗ ಅವರ ಮಕ್ಕಳು ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಆದ ಕಾರಣ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಇಬ್ಬರೇ ಬರೆದುಕೊಡುತ್ತೇವೆ ಎಂದು ತಿಳಿಸಿರುತ್ತಾರೆ. ನಿಪಿ-1 ಕ್ರಯದ

ಕರಾರು ಪತ್ರದಲ್ಲಿ 1 ನೇ ಪ್ರತಿವಾದಿಯ ಮಕ್ಕಳ ಹೆಸರನ್ನು ಕಾನೂನುಬದ್ಧವಾಗಿ ನಮೂದು ಮಾಡಬೇಕಾಗಿತ್ತು ಆದರೆ ನಮೂದು ಮಾಡಿಲ್ಲ ಎಂದರೆ ಸರಿ. ನನ್ನ ಸಮಕ್ಷಮದಲ್ಲಿ ವಾದಿಯು ಪ್ರತಿವಾದಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ನಡುವೆ ಆದಂತಹ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ವಾದಿಯು ಪ್ರತಿವಾದಿಗೆ ರೂ.1,40,000/- ಕೊಟ್ಟ ಬಗ್ಗೆ ನಮೂದಾಗಿರುತ್ತದೆ ಆದರೆ ವಾದಿಯು ನನ್ನ ಸಮಕ್ಷಮದಲ್ಲಿ ಪ್ರತಿವಾದಿಗೆ ಹಣವನ್ನು ಕೊಟ್ಟಿರುವುದಿಲ್ಲ. ಹೊನ್ನಾಳಿ ಪಟ್ಟಣ ಪಂಚಾಯಿತಿಯ ಪಕ್ಕದಲ್ಲಿ ನಾನು ಮಳಿಗೆಯನ್ನು ಇಟ್ಟುಕೊಂಡಿದ್ದೆನು. ನಿಪಿ-1 ಕ್ರಯದ ಕರಾರು ಪತ್ರವನ್ನು ನನ್ನ ಅಂಗಡಿ ಮಳಿಗೆಯಲ್ಲಿ ಬೆರಳಚ್ಚು ಮಾಡಿರುವುದಿಲ್ಲ. ಕಂಪ್ಯೂಟರ್ ಅಂಗಡಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ನಿಪಿ-1 ಕ್ರಯದ ಕರಾರು ಪತ್ರದಲ್ಲಿ ನಮೂದಾಗಿರುವ ಒಕ್ಕಣೆಗಳನ್ನು ನಾನು ಬೆರಳಚ್ಚು ಮಾಡಿರುವುದಿಲ್ಲ. ನನ್ನ ಕೆಲಸದ ಅನುಭವದಲ್ಲಿ ಕ್ರಯದ ಕರಾರು ಪತ್ರಗಳು ಹಣದ ವಿಚಾರಗಳಿಗೆ ಅಥವಾ ಜಮೀನು ಅಥವಾ ಆಸ್ತಿಯ ಮಾರಾಟಕ್ಕೆ ಸಂಬಂಧಿಸಿದಂತೆ ಮಾಡಿಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಿಪಿ-1 ಕ್ರಯ ಪತ್ರವನ್ನು ಆಸ್ತಿ ಮಾರಾಟದ ವಿಚಾರಕ್ಕೆ ಸಂಬಂಧಿಸಿದಂತೆ ಬರೆದುಕೊಟ್ಟಿದ್ದಾರೆ ಎಂದು ಗೊತ್ತು. ಆದರೆ ನಿಖರವಾಗಿ ವಾದಿ ಮತ್ತು ಪ್ರತಿವಾದಿ ಏನು ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಸೋಗಿಲು ಗ್ರಾಮದ ವಾಸಿ ಆಗಿದ್ದರಿಂದ ನ್ಯಾಮತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ನಾನು ಜನರಿಗೆ ಸಾಕಷ್ಟು ಚಿರಪರಿಚಿತ ಎಂದರೆ ಸರಿ. ವಾದಿಯು ತಮ್ಮ ಸಮುದಾಯದಲ್ಲಿ ಗಣ್ಯ ವ್ಯಕ್ತಿಗಳಾಗಿದ್ದಾರೆ ಮತ್ತು ನನಗೆ ಪರಿಚಯಸ್ಥರು ಎಂದರೆ ಸರಿ. ನನ್ನ ಮತ್ತು ವಾದಿಯ ನಡುವೆ ವಿಶ್ವಾಸ ಇರುತ್ತದೆ. ನ್ಯಾಮತಿ ಮತ್ತು ಹೊನ್ನಾಳಿ ತಾಲ್ಲೂಕಿನಿಂದ ಸುಮಾರು 35 ಪತ್ರ ಬರಹಗಾರರಿದ್ದೇವೆ. 35 ಪತ್ರ ಬರಹಗಾರರಲ್ಲಿ ವಾದಿಯು ನನ್ನ ಹತ್ತಿರ ಬಂದು ನಿಪಿ-1 ಕ್ರಯದ ಕರಾರು ಪತ್ರವನ್ನು ಮಾಡಿಸಿದ್ದಾರೆ ಎಂದರೆ ನನ್ನ ಜೊತೆ ತುಂಬಾ ವಿಶ್ವಾಸದಲ್ಲಿದ್ದಾರೆ ಎಂದರೆ ಸರಿಯಲ್ಲ. ನಿಪಿ-1 ಕ್ರಯ ಪತ್ರದ ಸಾಕ್ಷಿದಾರರು ನನಗೆ ಪರಿಚಯವಿರುವುದಿಲ್ಲ ಮತ್ತು ಈ ಮೊದಲು ಅವರು ನನ್ನ ಕಚೇರಿಗೆ ಬಂದಿರುವುದಿಲ್ಲ. ಕರಾರು ಪತ್ರವನ್ನು ತಯಾರು ಮಾಡಿ ಪಕ್ಷಗಾರರಸಹಿಯನ್ನು ಪಡೆದು ಮತ್ತು ನನ್ನ ಸಹಿ

ಮತ್ತು ಸೀಲನ್ನು ಹಾಕಿ ಪಕ್ಷಗಾರರ ಕೈಯಲ್ಲಿ ಕೊಡುತ್ತೇವೆ ತದನಂತರ ಅವರು ಏನು ಮಾಡಿಕೊಳ್ಳುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರು ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ. ಪತ್ರದ ಬಲಭಾಗದಲ್ಲಿ ಬರೆದುಕೊಡುವವರ ಸಹಿ ಮತ್ತು ಎಡಭಾಗದಲ್ಲಿ ಬರೆಸಿಕೊಳ್ಳುವವರ ಸಹಿಯನ್ನು ಪಡೆದುಕೊಳ್ಳುತ್ತೇನೆ. ನಾನು ಜಿಲ್ಲಾ ಪತ್ರ ಬರಹಗಾರನಾಗಿ ಕೆಲಸ ಮಾಡುತ್ತಿದ್ದರಿಂದ ಕರಡು ಕರಾರು ಪತ್ರವನ್ನು ತಯಾರು ಮಾಡಿ ಪಕ್ಷಗಾರರ ಸಹಿಯನ್ನು ಮತ್ತು ನನ್ನ ಸಹಿ ಮತ್ತು ಸೀಲನ್ನು ಹಾಕಿ ಉಪನೋಂದಣಿ ಕಚೇರಿಗೆ ನಾನೇ ಖುದ್ದಾಗಿ ತೆಗೆದುಕೊಂಡು ಹೋಗಿ ನೋಂದಣಿ ಮಾಡಿಸುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಪಿ-1 ಕ್ರಯದ ಕರಾರು ಪತ್ರವನ್ನು ನಾನು ಖುದ್ದಾಗಿ ನೋಂದಣಿ ಮಾಡಿಸಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಬಿದರಹಳ್ಳಿ ಗ್ರಾಮದಲ್ಲಿ 2018 ನೇ ಸಾಲಿನಲ್ಲಿ 1 ಎಕರೆ ಜಮೀನಿಗೆ ಅಂದಾಜು ರೂ.1,00,000/- ಮಾರಕಟ್ಟೆ ಮೌಲ್ಯ ಇರಬಹುದು. 24 ಗುಂಟೆ ಎಂದರೆ ಇನ್ನು 6 ಗುಂಟೆ ಜಮೀನು ಸೇರಿಸಿದೆ ¾ ಎಕರೆ ಜಮೀನು ಎಂದರೆ ಸರಿ. ಬಿದರಹಳ್ಳಿ ಗ್ರಾಮವು ಶಿಕಾರಿಪುರದಿಂದ ಶಿವಮೊಗ್ಗಕ್ಕೆ ಹೋಗುವ ಮುಖ್ಯ ರಸ್ತೆಯ ಹೆದ್ದಾರಿಯಲ್ಲಿ ಬರುತ್ತದೆ ಎಂದರೆ ಸರಿ. ಬಿದರಹಳ್ಳಿ ಗ್ರಾಮವು ರಸ್ತೆಯ ಹೆದ್ದಾರಿಯಲ್ಲಿ ಇರುವುದರಿಂದ ಜಮೀನುಗಳ ಮಾರುಕಟ್ಟೆ ಮೌಲ್ಯ ಜಾಸ್ತಿ ಇರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ನಮೂದಾಗಿರುವ ಆಸ್ತಿಗೆ ಸಂಬಂಧಪಟ್ಟಂತೆ ಉಪನೋಂದಣಿ ಕಚೇರಿಯಿಂದ ಮಾರುಕಟ್ಟೆ ಮೌಲ್ಯ ನಿರ್ಧರಣಾ ಪಟ್ಟಿಯನ್ನು ಪಡೆದುಕೊಂಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರ ಹೆಸರು ಮತ್ತು ಗುರುತನ್ನು ಗುರುತಿಸುವ ಸಲುವಾಗಿ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಕ್ರಯದ ಕರಾರು ಪತ್ರಗಳನ್ನು ತಯಾರು ಮಾಡುವ ಸಮಯದಲ್ಲಿ ಆಧಾರ್ ಕಾರ್ಡ್ ಗಳ ನಂಬರ್ ಅನ್ನು ನಮೂದು ಮಾಡುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2018 ನೇ ಸಾಲಿನಲ್ಲಿ ಆಧಾರ್ ಕಾರ್ಡ್ ಚಾಲ್ತಿಯಲ್ಲಿತ್ತು ಆದರೆ ಪಕ್ಷಗಾರರ ಆಧಾರ್ ಕಾರ್ಡನ್ನು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಪಕ್ಷಗಾರರ ಆಧಾರ್ ಕಾರ್ಡ್ ನಂಬರ್ ಅನ್ನು ಕೇಳಲು ಯಾವುದೇ ತೊಂದರೆ ಇರಲಿಲ್ಲ

ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಸಮಯದಲ್ಲಿ ನೋಂದಣಿ ಮಾಡಲು ಆಧಾರ್ ಕಾರ್ಡ್ ನಂಬರ್ ಕಡ್ಡಾಯವಾಗಿ ಇರಲಿಲ್ಲ ಆದ ಕಾರಣ ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ಕರಾರು ಪತ್ರದಲ್ಲಿ ಆಧಾರ್ ಕಾರ್ಡ್ ನಂಬರ್ ನಮೂದು ಮಾಡಬಹುದಿತ್ತು. ನಿಪಿ-1 ಕ್ರಯದ ಕರಾರು ಪತ್ರವನ್ನು ತಯಾರು ಮಾಡಿದ ನಂತರ ಪಕ್ಷಗಾರರ ಸಹಿಯನ್ನು ಪಡೆದುಕೊಳ್ಳುವ ಸಮಯದಲ್ಲಿ ಅವರ ಗುರುತಿನ ಚೀಟಿಗಳನ್ನು ನಾನು ನೋಡದೇ ಇದ್ದ ಕಾರಣ ಅವರೇ ಎಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನಿಪಿ-1 ಕರಾರು ಪತ್ರಕ್ಕೆ ಸಹಿ ಮಾಡಿದವರ ಬಗ್ಗೆ ದಾಖಲೆಗಳನ್ನು ನೋಡದೇ ಇದ್ದ ಕಾರಣ ಅವರೇ ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕ್ರಯದ ಕರಾರು ಪತ್ರವನ್ನು ಹಣದ ವಿಚಾರಕ್ಕೆ ಸಂಬಂಧಪಟ್ಟಂತೆ ಮಾಡಿಕೊಂಡ ಪಕ್ಷದಲ್ಲಿ ಸಾಲದ ಹಣವನ್ನು ಮರುಪಾವತಿ ಮಾಡಿದ ಸಂದರ್ಭದಲ್ಲಿ ರದ್ದುಯಾತಿ ಪತ್ರವನ್ನು ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಿಪಿ-1 ಕ್ರಯದ ಕರಾರು ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.